**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿಸಿ ನಂಬರ : 522/2023**

| | | |
|---|---|---|
| ಸಾಕ್ಷಿಯ ಹೆಸರು | ಃ ಮಂಜುನಾಥ | ಸಿ.ಡಬ್ಲ್ಯು. 3 |
| ತಂದೆಯ ಹೆಸರು | ಃ ಕಾಳಪ್ಪ | ಪಿ.ಡಬ್ಲ್ಯು 2 |
| ವಯಸ್ಸು | ಃ 42 ವರ್ಷ | |
| ಉದ್ಯೋಗ | ಃ ವ್ಯಾಪಾರ | |
| ವಾಸ ಸ್ಥಳ | ಃ ತರೀಕೆರೆ. | |

**ದಿನಾಂಕಃ 12-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ-1 ಮತ್ತು 2 ರವರ ಪರಿಚಯ ಇದೆ. ಚಾಸಾ-2 ರವರು ತೀರಿಕೊಂಡಿರುತ್ತಾರೆ. ನಿಪಿ.2 ಮತ್ತು 4 ರ ಮೇಲೆ ನನ್ನ ಸಹಿ ಇರುತ್ತವೆ. ಅವುಗಳನ್ನು ಮಹಜರ ಮಾಡುವ ಕಾಲಕ್ಕೆ ಸ್ಥಳದಲ್ಲಿ ಮತ್ತು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸಹಿಗಳನ್ನು ನಿಪಿ.2(ಬಿ) ಮತ್ತು 4(ಬಿ) ಎಂದು ಗುರುತಿಸಲಾಯಿತು. ನಿಪಿ.3 ಮತ್ತು 5 ಫೋಟೊದಲ್ಲಿ ನಾನು ಕಾಣಿಸುತ್ತಿದ್ದೇನೆ. ನಿಪಿ.3 ಅನ್ನು ಅಪಘಾತವಾದ ಸ್ಥಳದಲ್ಲಿ ಮತ್ತು ನಿಪಿ.5 ಅನ್ನು ಜಪ್ತಿ ಪಂಚನಾಮೆ ಕಾಲಕ್ಕೆ ತೆಗೆದಿದ್ದಾರೆ. ನನಗೆ ಜಪ್ತಿಪಡಿಸಿಕೊಂಡಿರುವ ವಾಹನಗಳ ನಂಬರ ಹೇಳಲಾಗುವುದಿಲ್ಲ, ಆದರೆ ನಿಪಿ.5 ರಲ್ಲಿ ಕಾಣಿಸುವ ವಾಹನಗಳನ್ನೇ ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ನಿಪಿ.2 ಮತ್ತು 4 ಕ್ಕೆ ಈಗ ಒಂದೂವರೆ ವರ್ಷದ ಹಿಂದೆ ಸಹಿ ಮಾಡಿದ್ದೇನೆ. ಪ್ರತ್ಯೇಕ್ಷ ದರ್ಶಿಗಳ ಪ್ರಕಾರ ಅಪಘಾತ ಪಡಿಸಿದ ವಾಹನ ಭದ್ರಾವತಿ ಕಡೆಯಿಂದ ಬರುತ್ತಿತ್ತು ಮತ್ತು ಮೃತನ ವಾಹನ ಭದ್ರಾವತಿಯ ಕಡೆಗೆ ಹೋಗುತ್ತಿತ್ತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಚಾಸಾ-1 ಮತ್ತು ನಾನು ಸ್ನೆಹಿತರು ಎಂದರೆ ಸರಿ. ನಾವು ಇಬ್ಬರೂ ವಾಸಪ್ಪ ಕಾಲೋನಿಯಲ್ಲಿ ವಾಸ ಮಾಡುತ್ತೇವೆ ಎಂದರೆ ಸರಿ. ನ್ಯಾಯಾಲಯಕ್ಕೆ ನಾನು ಮತ್ತು ಚಾಸಾ-1 ಜೊತೆಯಾಗಿ ಬಂದಿದ್ದೇವೆ ಎಂದರೆ ಸರಿ. ನಾನು ತರೀಕೆರೆ ಪೊಲೀಸ್ ಠಾಣೆಯ ಸಾಕಷ್ಟು ಪ್ರಕರಣಗಳಲ್ಲಿ ಮಹಜರ ವಿಟನೆಸ್ ಎಂದು ಸಾಕ್ಷಿ ಹೇಳಿದ್ದೇನೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇದ್ದ ಪ್ರಕರಣಗಳಲ್ಲಿ ಮಾತ್ರ ಹೇಳಿದ್ದೇನೆ ಎನ್ನುತ್ತಾರೆ. ನಾನು ವಾಸಪ್ಪ ಕಾಲೋನಿಯ ಪುರ ಸಭೆಯ ಸದಸ್ಯ ಸ್ಥಾನಕ್ಕ ಸ್ಪರ್ಧೆ ಮಾಡಿದ್ದೆ ಎಂದರೆ ಸರಿ. ಆ ಸಮಯದಲ್ಲಿ ರೇವಣ್ಣ ಬೆಂಬಲ ನೀಡಿದ್ದರು ಎಂದರೆ ಸರಿ. ಅದರ ಉಪಕಾರಕ್ಕಾಗಿ ಈ ಪ್ರಕರಣದಲ್ಲಿ ಆತನಿಗೆ ಅನುಕೂಲ ಆಗುವ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಕ್ಕೆ ಓದಿದ ನಂತರವೇ ಸಹಿ ಹಾಕಿದ್ದೇನೆ ಆದರೆ ಅದರಲ್ಲಿರುವ ಅಂಶಗಳು ಈಗ ನೆನಪಿಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಎರಡೂ ದಾಖಲೆಗೆ ಠಾಣೆಯಲ್ಲಿಯೇ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಿಷಯವನ್ನು ಪೊಲೀಸರಿಗೆ ಹೇಳಿ ಬರೆಸಿಲ್ಲ. ನನ್ನ

ಸಮಕ್ಷಮ ಯಾವುದೇ ಜಪ್ತಿ ಅಥವಾ ಸ್ಥಳ ಪಂಚನಾಮೆ ಪೊಲೀಸರು ಜರುಗಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***